**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ.776/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಅಭಿಷೇಕ ಹರಿಜನ | ಪಿಡಬ್ಲ್ಯೂ | 9 |
| ತಂದೆ:ಗಂಡನ ಹೆಸರು | : | ಪ್ರಕಾಶ | ಸಿಡಬ್ಲ್ಯೂ | 7 |
| ವಯಸ್ಸು | : | 19 ವರ್ಷ | | |
| ಉದ್ಯೋಗ | : | ವಿದ್ಯಾರ್ಥಿ | | |
| ವಾಸ ಸ್ಥಳ | : | ಮಾರನಬೀಡ | | |

**ದಿನಾಂಕ: 19.02.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ನನಗೆ ಚಾಸಾ–1 ರವರು ಪರಿಚಯ ಇರುವುದಿಲ್ಲ. ಚಾಸಾ–6 ರವರು ನನ್ನ ತಂದೆ. ಮೃತ ಬಸವರಾಜ ಹರ್ಲಾಪುರ ರವರ ಪರಿಚಯ ಇರುವುದಿಲ್ಲ. 2015 ನೇ ಸಾಲಿನಂದು ನಾನು ನನ್ನ ತಂದೆ ಚಾಸಾ–6 ರವರನ್ನು ಮತ್ತು ಬಸವರಾಜ ಹರ್ಲಾಪುರ ರವರು ಬೈಕ್ ಮೂಲಕ ಆಸ್ಪತ್ರೆಗೆ ಹೋಗುತ್ತಿರುವಾಗ ಸಂಜೆ ಸಮಯದಲ್ಲಿ ಹೊಂಬಳಿ– ಬಿಂಗಾಪುರ ರಸ್ತೆಯ ಬಳಿ ಆರೋಪಿ ತನ್ನ ಬೈಕ್ ಮೂಲಕ ಬಂದು ನಮ್ಮ ಬೈಕ್ ಡಿಕ್ಕಿ ಪಡಿಸಿದನು. ಆ ಬೈಕ್ ಬೇರೆ ಯಾರು ಇದ್ದರು ಎಂಬುದು ನನಗೆ ಗೊತ್ತಿಲ್ಲ. ಇದರಿಂದ ನನಗೆ ಪ್ರಜ್ಞೆ ತಪ್ಪಿ ಕಳೆಗಡೆ ಬಿದ್ದೇನು. ಈ ಅಪಪಿಾತದಿಂದ ತಲೆ ಒಡೆದು ರಕ್ತಗಾಯವರಾಗಿತ್ತು. ನನ್ನ ತಂದೆಯ ತಲೆಗೆ ಭುಜಕ್ಕೆ ಮತ್ತು ಬೆರಳಿಗೆ ಪೆಟ್ಟಾಯಿತು. ಬಸವರಾಜ ಹರ್ಲಾಪುರವರಿಗೂ ಸಹ ಕಾಲಿಗೆ ಪೆಟ್ಟಾಯಿತು. ಅ ನಂತರ ನಮ್ಮನ್ನು ಹಾನಗಲ್ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಯಿತು. ಆ ನಂತರ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲಿಸಿದರು. ಆ ದಿನ ಅಪಘಾತ ಪಡಿಸಿದ ವ್ಯಕ್ತಿಯನ್ನು ನೋಡಿದರೆ ಗುರುತಿಸಲಾಗುವುದಿಲ್ಲ ಈ ಹಂತದಲಲ್ ಆರೋಪಿ ಗೈರು ಹಾಜರಾಗಿದ್ದು ಆತನ ಹಾಜರಾತಿ ವಿನಾಯಿತಿ

ಕೋರಿ ಅರ್ಜಿ ಸಲ್ಲಿಸಿ ಆತನ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ದಿನಾಂಕ 23.11.2015 ರಂದು ಸಂಜೆ 06.30 ಗಂಟೆಗೆ ನಾವು ಆಸ್ಪತ್ರೆಗೆ ಹೋಗುತ್ತಿದ್ದೆವು ಎಂದರೆ ಸರಿ. ಆ ದಿನ ಆರೋಪಿ ತನ್ನ ಬೈಕ್ ಮೂಲಕ ಅತೀ ವೇಗವಾಗಿ ಬಂದು ಡಿಕ್ಕಿ ಪಡಿಸಿದನು ಎಂದರೆ ಸರಿ. ಆ ಸಂದರ್ಭದಲ್ಲಿ ಆ ಸ್ಥಳದಲ್ಲಿ ಇದ್ದ ಜನರು ನಮ್ಮನ್ನು ಹಾನಗಲ್ ಸರಕಾರಿ ಆಸ್ಪತರೆಗೆ ಚಿಕಿತ್ಸೆಗ ದಾಖಲಿಸಿ ಆ ನಂತರ ಹೆಚ್ಚಿನ ಚಿಕಿತ್ಸೆಗೆಗಾಗಿ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಹೋದವು ಎಂದರೆ ಸರಿ. ಈ ಅಪಘಾತದಿಂದ ಬಸವರಾಜ ಹರ್ಲಾಪುರ ರವರು ಮೃತ ಪಟ್ಟರು ಎಂಬುವ ವಿಚಾರ ಗೊತ್ತಾಯಿತು ಎಂದರೆ ಸರಿ. ಈ ಬಗ್ಗೆ ಪೋಲಿಸರು ಹೇಳಿಕೆ ಪಡೆದರು ಎಂದರೆ ಸರಿಯಲ್ಲಲ ಆ ಅಲ್ಲ ಗಳೆದ ಹೇಳಿಕೆಯ ಭಾಗವನ್ನು ನಿಪಿ-11 ಎಂದು, ಈ ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**:ಪಾಟೀ ಸವಾಲು: ಆರೋಪಿ ಪರ ಶ್ರೀ.ಎಸ್ ಜಿ ಟಿ ವಕೀಲರಿಂದ:**

ನಾನು 2 ನೇ ವರ್ಷದ ಪದವಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ಈ ಅಪಪಿಾತವಾದ ನಾನು 5 ನೇ ತರಗತಿ ಓದುತ್ತಿದ್ದೇನು. ಈ ಅಪಘಾತದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ಆ ದಿನ ನನಗೆ ಹುಷಾರ ಇಲ್ಲದ ಕಾರಣ ಬೆಳಗಾಲಪೇಟೆ ಆಸ್ಪತ್ರೆಗೆ ಹೋಗುತ್ತಿದ್ದೆವು. ಈ ಅಪಘಾತವು ರಸ್ತೆಯ ಎಡಭಾಗದಲ್ಲಿ ಆಗಿದೆ. ಅಪಘಾತವಾದ ಸ್ಥಳದ ಚಕ್ಕುಬಂದಿ ನನಗೆ ಗೊತ್ತಿಲ್ಲ. ಈ ಅಪಘಾತದದಿಂದ ನನ್ನ ತಲೆಗೆ ಪೆಟ್ಟಾಗಿರುವುದಿಲ್ಲ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನನಗೆ ಪ್ರಜ್ಞೆ ತಪ್ಪಿದ ಕಾರಣ ಯಾರು ಆಸ್ಪತ್ರೆಗೆ ಕರೆದುಕೊಂಡು ಹೋದರು

ಎಂಬುದು ನನಗೆ ಗೊತ್ತಿಲ್ಲ. ಅಪಘಾತವಾದ ಎಷ್ಟು ದಿನಗಳ ನಂತರ ಬಸವರಾಜ ಹರ್ಲಾಪುರ ರವರು ಮೃತ ಪಟ್ಟರು ಎಂಬುದು ನನಗೆ ಗೊತ್ತಿಲ್ಲ. ಆ ದಿನ ಆರೋಪಿ ರಸ್ತೆಯ ಎಡಭಾಗದಲ್ಲಿ ತನ್ನ ಊರಿಗೆ ಹೊರಟಿದ್ದರು ಎಂದರೆ ಸರಿ. ಆ ದಿನ ಯಾವುದೇ ಅಪಘಾತವಾಗಿಲ್ಲ ಇದರಿಂದ ನಮಗೆ ಯಾವುದೇ ಗಾಯಗಳಾಗಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ